ಕರ್ನಾಟಕ ಸರ್ಕಾರ

# ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಗಲಕೋಟೆ

**ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ-209, ನವನಗರ - 587103**

**ದೂರವಾಣಿ ಸಂಖ್ಯೆ: 08354-297708,235708** **ಇ-ಮೇಲ್: dd.wcd.bgk@gmail.com**

ಸಂಖ್ಯೆ:ಉನಿಬಾ/ಮಮಅಇ/ಜಿಬಾಭ/ಸಿಬ್ಬಂದಿ ಆಯ್ಕೆ/2025-26 ದಿನಾಂಕ : 02-05-2025

## :: ಪತ್ರಿಕಾ ಪ್ರಕಟಣೆ ::

**ವಿಷಯ** : ಜಿಲ್ಲಾ ಬಾಲಭವನ ಬಾಗಲಕೋಟೆಯಲ್ಲಿ ಕಾರ್ಯನಿರ್ವಹಿಸಲು ಕಾರ್ಯಕ್ರಮ ಸಂಯೋಜಕರ ಹುದ್ದೆಗೆ ಗೌರವ ಧನ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳುವದಕ್ಕೆ ಸಂಬಂಧಿಸಿ ಅರ್ಹರಿಂದ ಅರ್ಜಿ ಆಹ್ವಾನಿಸುವ ಬಗ್ಗೆ.

**ಉಲ್ಲೇಖ** : 1) ಸಂಖ್ಯೆ:ಬಾಭಸೊ/ಎವಿಎಸ್-3/ಜಿಬಾಭ/ಕಾಸಂಕಸ/2018-19 ದಿನಾಂಕ: 17-07-2018.
2) ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಬಾಗಲಕೋಟೆ ಹಾಗೂ ಅಧ್ಯಕ್ಷರು, ಜಿಲ್ಲಾ ಬಾಲಭವನ, ಬಾಗಲಕೋಟೆ ಇವರ ಅನುಮೋದನೆ ದಿನಾಂಕ: 28/04/2025

*****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲಾ ಬಾಲಭವನ ಬಾಗಲಕೋಟೆಯಲ್ಲಿ ಕಾರ್ಯನಿರ್ವಹಿಸಲು ಅರ್ಹ ವಿದ್ಯಾರ್ಹತೆಯುಳ್ಳ ಕಾರ್ಯಕ್ರಮ ಸಂಯೋಜಕರು ಹುದ್ದೆಗೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಬಾಗಲಕೋಟೆ ರವರ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿಯಲ್ಲಿ ಗೌರವ ಧನ ಆಧಾರದ ಮೇಲೆ ತಾತ್ಕಾಲಿಕವಾಗಿ ಆಯ್ಕೆ ಮಾಡಿಕೊಳ್ಳಲು ಅರ್ಹ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ. ಅರ್ಜಿಯ ನಮೂನೆಯನ್ನು **bagalkot.nic.in** ಯಲ್ಲಿ ಪಡೆಯುವದು.

ಅರ್ಹ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು **ದಿನಾಂಕ: 23-05-2025** ರಂದು ಕಛೇರಿಯ ಅವಧಿಯ ಒಳಗೆ ಅಗತ್ಯ ದಾಖಲಾತಿಗಳೊಂದಿಗೆ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಗಲಕೋಟ ರವರ ಕಾರ್ಯಾಲಯದಲ್ಲಿ ಅರ್ಜಿಗಳನ್ನು ಸಲ್ಲಿಸಲು ತಿಳಿಸಲಾಗಿದೆ.

**ಅ) ಹುದ್ದೆಗಳ ವಿವರ, ವಿದ್ಯಾರ್ಹತೆ, ಸಂಚಿತ ವೇತನದ ವಿವರ :-**

| ಕ್ರ.ಸಂ | ಹುದ್ದೆಗಳ ವಿವರ | ಹುದ್ದೆಗಳ ಸಂಖ್ಯೆ. | ಮಾಸಿಕ ಗೌರವಧನ | ನಿಗದಿಪಡಿಸಲಾದ ವಿದ್ಯಾರ್ಹತೆ |
|---|---|---|---|---|
| 1 | **ಕಾರ್ಯಕ್ರಮ ಸಂಯೋಜಕರು** | **01 ಹುದ್ದೆ** | **ರೂ. 19,223/-** | ಯಾವುದಾದರು ಪದವಿ ಮತ್ತು ಕಂಪ್ಯೂಟರ್ ಜ್ಞಾನದೊಂದಿಗೆ ಸೃಜನಾತ್ಮಕ ಮತ್ತು ಕ್ರಿಯಾತ್ಮಕ ಚಟುವಟಿಕೆಗಳ ಯಾವುದಾದರೂ ಒಂದು ಕಲಾ ಕ್ಷೇತ್ರಗಳಲ್ಲಿ ಕೌಶಲ್ಯ ಹೊಂದಿರಬೇಕು. ಬಾಲಭವನದಲ್ಲಿ ಕನಿಷ್ಠ ಐದು ವರ್ಷಗಳಿಗು ಮೇಲ್ಪಟ್ಟು ಕರ್ತವ್ಯ ನಿರ್ವಹಿಸಿದ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. |

**ಆ) ನೇಮಕಾತಿ ಷರತ್ತುಗಳು :-**

1) ಸದರಿ ನೇಮಕಾತಿಯನ್ನು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಬಾಗಲಕೋಟೆ ರವರ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿಯಲ್ಲಿ ಗೌರವ ಧನ ಮೇರೆಗೆ ಆಧಾರದ ಮೇಲೆ ಮಾಡಿಕೊಳ್ಳಲಾಗುತ್ತದೆ.

2) ಸದರಿ ನೇಮಕಾತಿಯನ್ನು ಸಂಚಿತ ವೇತನದ ಆಧಾರದ ಮೇಲೆ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದ್ದು, ಅಭ್ಯರ್ಥಿಗಳ ಕಾರ್ಯಕ್ಷಮತೆಯನ್ನು ಪರಿಗಣಿಸಿ ಮಾನ್ಯ ಅಧ್ಯಕ್ಷರು, ಜಿಲ್ಲಾ ಬಾಲಭವನ ಸಮಿತಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಬಾಗಲಕೋಟೆ ರವರ ಅಧ್ಯಕ್ಷತೆಯಲ್ಲಿನ ಸಮಿತಿಯಲ್ಲಿ ಸೇವೆ ಮುಂದುವರಿಕೆಗಾಗಿ ಒಪ್ಪಿಗೆ ಪಡೆದುಕೊಂಡು ಸೇವೆಯನ್ನು ಮುಂದುವರಿಸಲು ಕ್ರಮವಹಿಸಲಾಗುವದು.

3) ಸದರಿ ಹುದ್ದೆಯು 11 ತಿಂಗಳು ಯೋಜನೆಯು ಎಲ್ಲಿಯವರೆಗೆ ಜಾರಿಯಲ್ಲಿರುತ್ತದೆಯೋ ಅಲ್ಲಿಯವರೆಗೆ ಯಾವದು ಮೊದಲು ಅದನ್ನು ಪರಿಗಣಿಸಲಾಗುವುದು.

4) ಸದರಿ ಆಯ್ಕೆಯು ತಾತ್ಕಾಲಿಕವಾಗಿದ್ದು, ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ಸೇವೆ ಖಾಯಂ ಮಾಡುವ ಸಂಬಂಧ ಹಕ್ಕೊತ್ತಾಯ ಮಾಡುವಂತಿಲ್ಲ.

5) ಆಯ್ಕೆಯಾದ ಅಭ್ಯರ್ಥಿಯವರು ಜಿಲ್ಲಾ ಬಾಲಭವನದ ನಿಯಮಾವಳಿಗಳನ್ವಯ ಕಾರ್ಯನಿರ್ವಹಿಸಲು ಸಿದ್ದರಿರಬೇಕು.

6) ಆಯ್ಕೆಯಾದ ಸಿಬ್ಬಂದಿಯವರು ಪ್ರತಿ ತಿಂಗಳು ಜಿಲ್ಲಾ ಬಾಲಭವನದ ಆರ್ಥಿಕ/ಭೌತಿಕ ಮಾಸಿಕ ಪ್ರಗತಿ ವರದಿಯನ್ನು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಗಲಕೋಟೆ ಸೇರಿದಂತೆ ಮಾಹಿತಿ ಅವಶ್ಯವಿರುವ ಎಲ್ಲಾ ಕಾರ್ಯಾಲಯಗಳಿಗೆ ಮಾಸಿಕ ಪ್ರಗತಿ ವರದಿಗಳನ್ನು ಸಲ್ಲಿಸಬೇಕು.

7) ಆಯ್ಕೆಯಾದ ಸಿಬ್ಬಂದಿಯವರು ಕಾಲಕಾಲಕ್ಕೆ ಇಲಾಖೆಯಿಂದ ನೀಡಲಾಗುವ ಯಾವುದೇ ತರಬೇತಿಗಳನ್ನು ಪಡೆದುಕೊಳ್ಳಲು ಸಿದ್ದರಿರಬೇಕು. ಹಾಗೂ ಅವಶ್ಯವಿದ್ದಾಗ ಕೇಂದ್ರ ಕಛೇರಿಯಲ್ಲಿ ನಡೆಯುವ ಸಭೆಗಳಿಗೆ ಹೋಗಲು ಸಿದ್ದರಿರಬೇಕು.

8) ಆಯ್ಕೆಯಾದ ಕಾರ್ಯಕ್ರಮ ಸಂಯೋಜಕರು ಜಿಲ್ಲಾ ಹಾಗೂ ತಾಲ್ಲೂಕು ಬಾಲಭವನಗಳಲ್ಲಿ ಕಾರ್ಯಕ್ರಮ/ ಚಟುವಟಿಕೆಗಳನ್ನು ಕೇಂದ್ರ ಕಛೇರಿಯ/ ಜಿಲ್ಲಾ ಕಛೇರಿಯ ನಿರ್ದೇಶನದಂತೆ ಉಸ್ತುವಾರಿಯನ್ನು ನಿರ್ವಹಿಸಿಕೊಂಡು ಹೋಗಬೇಕು. ಹಾಗೂ ಸಂಬಂಧಿಸಿದ ತಾಲ್ಲೂಕುಗಳಿಗೆ ಭೇಟಿ ನೀಡಿ ಕಾರ್ಯಕ್ರಮ ನಿರ್ವಹಿಸುವುದು. ಮತ್ತು ಮೇಲಾಧಿಕಾರಿಗಳು ಸೂಚಿಸುವ ಇನ್ನಿತರ ಕರ್ತವ್ಯ ನಿರ್ವಹಿಸುವುದು.

9) ಕಛೇರಿ ಸಹಾಯಕರು ಜಿಲ್ಲಾ/ತಾಲ್ಲೂಕು ಬಾಲಭವನಗಳಿಗೆ ಸಂಬಂಧಿಸಿದ ಕಾರ್ಯಕ್ರಮ/ ಚಟುವಟಿಕೆಗಳಿಗೆ ಸಂಬಂಧಿಸಿದ ಕೆಲಸ ನಿರ್ವಹಿಸುವುದು, ಕಾರ್ಯಕ್ರಮ ಸಂಯೋಜಕರಿಗೆ ಸಹಾಯ ಮಾಡುವುದು ಹಾಗೂ ಮೇಲಾಧಿಕಾರಿಗಳು ಸೂಚಿಸುವ ಇನ್ನಿತರ ಕರ್ತವ್ಯ ನಿರ್ವಹಿಸುವುದು.

10) ಆಯ್ಕೆಯಾದ ಸಿಬ್ಬಂದಿಯವರಿಗೆ ಅನುದಾನದ ಲಭ್ಯತೆಯ ಆಧಾರದ ಮೇಲೆ ಸಂಚಿತ ವೇತನವನ್ನು ನಿಯಮಾನುಸಾರ ಬಾಲಭವನ ಸೊಸೈಟಿ, ಬೆಂಗಳೂರು ರವರ ನಿರ್ದೇಶನದನ್ವಯ ಪಾವತಿಸಲಾಗುವುದು.

11) ಅರ್ಹ ವಿದ್ಯಾರ್ಹತೆ ಹೊಂದಿ ಈಗಾಗಲೇ ಕಾರ್ಯನಿರ್ವಹಿಸಿದ ಅನುಭವ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದಲ್ಲಿ ನಿಯಮಾನುಸಾರ ಆದ್ಯತೆ ನೀಡಲಾಗುವದು.

12) ಅಭ್ಯರ್ಥಿಗಳ ಆಯ್ಕೆಯಲ್ಲಿ ಆಯ್ಕೆ ಸಮಿತಿಯ ನಿರ್ಣಯವೇ ಅಂತಿಮವಾಗಿರುತ್ತದೆ.

13) ನಿಗದಿತ ಕಾಲಾವಧಿಯ ನಂತರ ಈ ಕಛೇರಿಗೆ ಸ್ವೀಕೃತವಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

14) ಅರ್ಜಿ ನಮೂನೆ ಮತ್ತು ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೊಠಡಿ ಸಂಖ್ಯೆ-209, ಜಿಲ್ಲಾ ಆಡಳಿತ ಭವನ, ನವನಗರ, ಬಾಗಲಕೋಟೆ-587103 ರವರ ಕಾರ್ಯಾಲಯಲಯದಲ್ಲಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

15) ಅರ್ಜಿಯ ನಮೂನೆಯನ್ನು **bagalkot.nic.in** ಯಲ್ಲಿ ಪಡೆಯಬಹುದು.

ಉಪ ನಿರ್ದೇಶಕರು
**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**
**ಬಾಗಲಕೋಟೆ**

<u>ಪ್ರತಿಯನ್ನು</u> :-

1) ಮಾನ್ಯ ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.
2) ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ , ಬಾಗಲಕೋಟೆ ರವರಿಗೆ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.
3) ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ ಬಾಗಲಕೋಟೆ ರವರಿಗೆ ಮಾಹಿತಿಗಾಗಿ ಹಾಗೂ ಸದರಿ ಪ್ರಕಟಣೆಯನ್ನು ಜಿಲ್ಲಾ ಮಟ್ಟದ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆಗಾಗಿ ಕೋರಲಾಗಿದೆ.
4) ಕಚೇರಿ ಪ್ರತಿ.

## 2025-26ನೇ ಸಾಲಿನಲ್ಲಿ ಬಾಗಲಕೋಟೆ ಜಿಲ್ಲೆಯ ಜಿಲ್ಲಾ ಬಾಲಭವನದಲ್ಲಿ ಜಿಲ್ಲಾ ಕಾರ್ಯಕ್ರಮ ಸಂಯೋಜಕರ ಹುದ್ದೆಯ ಅರ್ಜಿ ನಮೂನೆ.

### ಅರ್ಜಿದಾರರಿಗೆ ಪ್ರಮುಖ ಸೂಚನೆಗಳು

1) ಪಾಸ್ ಪೋರ್ಟ್ ಗಾತ್ರದ ಭಾವಚಿತ್ರ.
2) ಜನ್ಮ ದಿನಾಂಕ ನಮೂದಿಸಿರುವ ದಾಖಲೆ (ಜನನ ಪ್ರಮಾಣ ಪತ್ರ/ವರ್ಗಾವಣೆ ಪ್ರಮಾಣ ಪತ್ರ/ ಎಸ್.ಎಸ್.ಎಲ್.ಸಿ ಅಂಕಪಟ್ಟಿ/ ಇನ್ನಿತರ ಪ್ರಮಾಣ ಪತ್ರ).
3) ಶೈಕ್ಷಣಿಕ ಅರ್ಹತೆ (ಅಂಕಪಟ್ಟಿ)
4) ಕಂಪ್ಯೂಟರ್ ಕಲಿಕೆ ಜ್ಞಾನ ಹೊಂದಿದ ಪ್ರಮಾಣ ಪತ್ರ. (Typing ಕನ್ನಡ ಮತ್ತು ಇಂಗ್ಲೀಷ)
5) ಬಾಗಲಕೋಟೆ ಜಿಲ್ಲೆಯವರಿಗೆ ಪ್ರಥಮ ಆದ್ಯತೆ
6) ಸರ್ಕಾರ ನಿಗದಿಪಡಿಸಿರುವ ಯಾವುದೇ ಮಿಸಲಾತಿ ಹಾಗೂ ವಯೋಮಿತಿ ರಿಯಾಯಿತಿ ಅನ್ವಯಿಸುವುದಿಲ್ಲ.
7) ಅರ್ಜಿ ನಮೂನೆ ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ಈ ಕಛೇರಿಗೆ ದಿನಾಂಕ: **23-05-2025** ರೊಳಗಾಗಿ ಸಲ್ಲಿಸುವುದು.

**ಅರ್ಜಿದಾರರ ವಿವರಗಳು :**

| | |
|---|---|
| **ಅರ್ಜಿ ಸಲ್ಲಿಸುತ್ತಿರುವ ಜಿಲ್ಲೆಯ ಹೆಸರು*** | **ಬಾಗಲಕೋಟೆ** |
| **ಯೋಜನೆಯ ಹೆಸರು*** | **ಜಿಲ್ಲಾ ಬಾಲಭವನ** |
| **ಅರ್ಜಿದಾರರ ಹೆಸರು*** | |
| **ತಂದೆ/ತಾಯಿ/ಗಂಡನ ಹೆಸರು*** | |
| **ಹುಟ್ಟಿದ ದಿನಾಂಕ*** | |
| **ಅರ್ಜಿದಾರರ ಸ್ವಂತ ಗ್ರಾಮದ ಹೆಸರು*** | |
| **ಲಿಂಗ*** | **O ಹೆಣ್ಣು O ಗಂಡು** |
| **ಅರ್ಜಿದಾರರ ಅಂಚೆಯ ಪೂರ್ಣ ವಿಳಾಸ*** | **ಪಿನ್ ಕೋಡ್ :** |
| **ಮೊಬೈಲ್ ಸಂಖ್ಯೆ (Aadhar linked number)*** | |
| **ಕಂಪ್ಯೂಟರ್ ಜ್ಞಾನ** | |
| **ಬಾಲಭವನ/ ಮಕ್ಕಳ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಅನುಭವ** | |

**ಶೈಕ್ಷಣಿಕ ಅರ್ಹತೆ (ಪದವಿ ಕಡ್ಡಾಯ) :**

| | |
|---|---|
| **ವಿದ್ಯಾರ್ಹತೆ*** | |
| **ಪಡೆದ ಅಂಕ*** | ಶೇ. |

ಅರ್ಜಿದಾರರ ಸಹಿ

**ಘೋಷಣೆ**

ಈ ಮೇಲಿನ ಅರ್ಜಿಯಲ್ಲಿ ಒದಗಿಸಲಾದ ಮಾಹಿತಿಯು ನನ್ನ ತಿಳುವಳಿಕೆಯ ಪ್ರಕಾರ ಸರಿಯಾಗಿರುವುದಾಗಿ ನಾನು ಈ ಮೂಲಕ ಪ್ರಮಾಣೀಕರುಸುತ್ತೇನೆ.*

☐ **I Agree ***